# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| ಭಾಗ – ೧<br>Part – I | ಬೆಂಗಳೂರು, ಬುಧವಾರ, ೦೯, ಸೆಪ್ಟೆಂಬರ್, ೨೦೨೬ (ಭಾದ್ರಪದ ೧೮, ಶಕವರ್ಷ, ೧೯೪೮)<br>BENGALURU, WEDNESDAY, 09, SEPTEMBER, 2026 ( BHADRAPADA 18, SHAKAVARSHA, 1948) | ನಂ. ೯೧೮<br>No. 918 |
|---|---|---|


## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ರಾಜ್ಯದಲ್ಲಿನ ಸ್ಥಳೀಯ ಯೋಜನಾ ಪ್ರದೇಶಗಳಲ್ಲಿನ ಅನುಮೋದಿತ ಮಹಾಯೋಜನೆ ಹೊಂದಿರುವ ಹಾಗೂ ಮಹಾಯೋಜನೆ ತಯಾರಿಕೆಯ ವಿವಿಧ ಹಂತಗಳಲ್ಲಿರುವ ನಗರ/ಪಟ್ಟಣಗಳಿಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 76-ಕೆ ರಡಿಯಲ್ಲಿ ಪ್ರದತ್ತವಾದ ಅಧಿಕಾರದನ್ವಯ ಸದರಿ ಕಾಯ್ದೆಯ ಕಲಂ 12(1)(ಬಿ) ರಂತೆ ತಯಾರಿಸಿರುವ GIS ಆಧಾರಿತ Road Network Grid Plan ಗೆ ಸದರಿ ಕಾಯ್ದೆಯ ಕಲಂ 13(1) ರಡಿಯಲ್ಲಿ ಸರ್ಕಾರದಿಂದ ತಾತ್ಕಾಲಿಕ ಅನುಮೋದನೆ ನೀಡುವ ಕುರಿತು.

**ಉಲ್ಲೇಖ:**
1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ ರವರ ಅಧ್ಯಕ್ಷತೆಯಲ್ಲಿ ದಿನಾಂಕ:21-11-2025, ದಿನಾಂಕ:13-01-2026 ಮತ್ತು ದಿನಾಂಕ: 22-04-2026 ರಂದು ನಡೆದ ಸಭೆಯ ನಡಾವಳಿಗಳು.
2. ಆಯುಕ್ತರು, ನಗರ ಭೂ ಸಾರಿಗೆ ನಿರ್ದೇಶನಾಲಯ, ಬೆಂಗಳೂರು ಇವರ ಪತ್ರ ಸಂಖ್ಯೆ:DULT-TECH/5/2026/674, ದಿನಾಂಕ:31-08-2026.

********

**ಪ್ರಸ್ತಾವನೆ**

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 4(ಎ) ರನ್ವಯ ರಾಜ್ಯದ ವಿವಿಧ ನಗರಗಳು/ ಪಟ್ಟಣಗಳಲ್ಲಿ ಸ್ಥಳೀಯ ಯೋಜನಾ ಪ್ರದೇಶಗಳನ್ನು ಘೋಷಿಸಲಾಗಿದ್ದು, ಕೆಲವು ನಗರಗಳು/ ಪಟ್ಟಣಗಳಿಗೆ ಮಹಾಯೋಜನೆಗಳನ್ನು (Master Plans) ತಯಾರಿಸಿ ಸರ್ಕಾರದಿಂದ ಅನುಮೋದಿಸಲಾಗಿದೆ. ಇನ್ನು ಕೆಲವು ನಗರಗಳು/ ಪಟ್ಟಣಗಳಿಗೆ ಮಹಾಯೋಜನೆಗಳ ತಯಾರಿಕೆ ಹಾಗೂ ಅನುಮೋದನೆ ಪ್ರಕ್ರಿಯೆಯು ಪ್ರಗತಿಯಲ್ಲಿರುತ್ತದೆ.

ರಾಜ್ಯದ 2ನೇ ಮತ್ತು 3ನೇ ದರ್ಜೆಯ (Tier-II & Tier-III) ನಗರಗಳು/ ಪಟ್ಟಣಗಳಲ್ಲಿ ಉದ್ಯೋಗಾವಕಾಶಗಳನ್ನು ಸೃಷ್ಟಿಸುವ ಕೈಗಾರಿಕಾ ಹಾಗೂ ವಾಣಿಜ್ಯ ಚಟುವಟಿಕೆಗಳಿಗೆ ಉತ್ತೇಜನ ನೀಡುವುದು ಹಾಗೂ ನಗರಗಳ ಸಮಗ್ರ ಮತ್ತು ಸುಸ್ಥಿರ ಅಭಿವೃದ್ಧಿಯನ್ನು ಖಚಿತಪಡಿಸಿಕೊಳ್ಳುವುದು ಅಗತ್ಯವಾಗಿದೆ.

ಈ ಹಿನ್ನೆಲೆಯಲ್ಲಿ, ಸರ್ಕಾರದಿಂದ ಈಗಾಗಲೇ ಅನುಮೋದಿಸಲ್ಪಟ್ಟು ಜಾರಿಯಲ್ಲಿರುವ ಮಹಾಯೋಜನೆಗಳಲ್ಲಿ ಅಳವಡಿಸಿ ಹಾಲಿ ರಸ್ತೆ ಜಾಲಕ್ಕೆ ಪೂರಕವಾಗಿ, ನಗರ/ ಪಟ್ಟಣಗಳ ಭವಿಷ್ಯದ ಬೆಳವಣಿಗೆ, ಸಂಚಾರ ದಟ್ಟಣೆ ನಿವಾರಣೆ, ಸಂಪರ್ಕ ವ್ಯವಸ್ಥೆಯ ಸುಧಾರಣೆ ಹಾಗೂ ಕೈಗಾರಿಕಾ ಮತ್ತು ವಾಣಿಜ್ಯ ಚಟುವಟಿಕೆಗಳ ವಿಸ್ತರಣೆಗೆ ಅನುಕೂಲವಾಗುವಂತೆ, ಅಗತ್ಯವಿರುವ ಕಡೆಗಳಲ್ಲಿ ಹೆಚ್ಚುವರಿಯಾಗಿ ವರ್ತುಲ ರಸ್ತೆ (Ring Road), ಸಂಪರ್ಕ ರಸ್ತೆ ಹಾಗೂ ಪ್ರಮುಖ ರಸ್ತೆಜಾಲವನ್ನು ಗುರುತಿಸಿ/ ಅಳವಡಿಸಿ ವಿಸ್ತರಿಸುವ ಪ್ರಸ್ತಾವನೆ ಹಾಗೂ ಮಹಾಯೋಜನೆಗಳ ತಯಾರಿಕೆಯ ವಿವಿಧ ಹಂತಗಳಲ್ಲಿರುವ ನಗರಗಳು/ ಪಟ್ಟಣಗಳಲ್ಲಿಯೂ ಸಹ ಉದ್ಯೋಗಾವಕಾಶಗಳನ್ನು ಸೃಷ್ಟಿಸುವ ಕೈಗಾರಿಕಾ ಹಾಗೂ ವಾಣಿಜ್ಯ ಚಟುವಟಿಕೆಗಳಿಗೆ ಉತ್ತೇಜನ ನೀಡಲು, ನಗರಗಳ ಸಮಗ್ರ, ಸುಸ್ಥಿರ ಮತ್ತು ಯೋಜಿತ ಅಭಿವೃದ್ಧಿಗೆ ಪೂರಕವಾದ ರಸ್ತೆಜಾಲವನ್ನು ರೂಪಿಸುವ ಪ್ರಸ್ತಾವನೆಯು ಸರ್ಕಾರದ ಪರಿಗಣನೆಯಲ್ಲಿರುತ್ತದೆ.

ಮೇಲೆ ಓದಲಾದ ಉಲ್ಲೇಖ(1)ರ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಗಳಲ್ಲಿ ಕೈಗೊಂಡ ನಿರ್ಣಯಗಳಂತೆ ನಗರ ಭೂ ಸಾರಿಗೆ ನಿರ್ದೇಶನಾಲಯ (DULT) ವತಿಯಿಂದ ಕೈಗೊಳ್ಳಲಾಗಿರುವ ರಾಜ್ಯದಲ್ಲಿನ ಸ್ಥಳೀಯ ಯೋಜನಾ ಪ್ರದೇಶಗಳಲ್ಲಿ ಅಸ್ತಿತ್ವದಲ್ಲಿರುವ ಅನುಮೋದಿತ ಮಹಾಯೋಜನೆಗಳ ನಕ್ಷೆಯಲ್ಲಿನ ರಸ್ತೆ ಪರಿಚಲನಾ ಜಾಲವನ್ನು ಹಾಗೂ ಅನುಮೋದನೆಯ ಹಂತದಲ್ಲಿರುವ ಮಹಾಯೋಜನೆಗಳ ವ್ಯಾಪ್ತಿಗೆ ಒಳಪಡುವ ನಗರ/ ಪಟ್ಟಣಗಳ ರಸ್ತೆ ಜಾಲವನ್ನು ಸಹ GIS ಆಧಾರಿತವಾಗಿ ಹೆಚ್ಚು ಪರಿಣಾಮಕಾರಿಯಾಗಿ ಸುಧಾರಿಸಿ, ನವೀಕರಿಸುವ ಕಾರ್ಯವನ್ನು ತ್ವರಿತಗೊಳಿಸಿ, ಮೊಬಿಲಿಟಿ ಗ್ರಿಡ್ಯೋಜನೆಗಳು ಹಾಗೂ ರಸ್ತೆ ಪರಿಚಲನಾಜಾಲಗಳನ್ನು ಇತರೆ ಪಟ್ಟಣಗಳ ಗ್ರಿಡ್ಯೋಜನೆಗಳೊಂದಿಗೆ ಸಮನ್ವಯಗೊಳಿಸುವ ಮೂಲಕ, ಅವುಗಳು ಸ್ಥಳೀಯವಾಗಿ ಪರಸ್ಪರ ಸಮಗ್ರವಾಗಿ (Spatially Integrated) ಹೊಂದಾಣಿಕೆಯಾಗುವಂತೆ ಕ್ರಮವಹಿಸಲು ನಿರ್ದೇಶಿಸಲಾಗಿರುತ್ತದೆ.

ಮೇಲಿನ ನಿರ್ದೇಶನದನ್ವಯ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 12(1)(ಬಿ)ರಡಿ ಅನುಬಂಧ-1ರಲ್ಲಿ ನಮೂದಿಸಿರುವ ಸ್ಥಳೀಯ ಯೋಜನಾ ಪ್ರದೇಶಗಳಿಗೆ ಸಂಬಂಧಿಸಿದಂತೆ ತಯಾರಿಸಲಾದ GIS ಆಧಾರಿತ Road Network Grid Plans ಗಳನ್ನು ಉಲ್ಲೇಖ (2)ರಲ್ಲಿ ಆಯುಕ್ತರು, ನಗರ ಭೂಸಾರಿಗೆ ನಿರ್ದೇಶನಾಲಯ (DULT) ರವರು, ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಯು ಮುಂದಿನ ದಿನಗಳಲ್ಲಿ 2ನೇ ಮತ್ತು 3ನೇ ದರ್ಜೆಯ (Tier-I & II) ನಗರ / ಪಟ್ಟಣಗಳಲ್ಲಿ ಯೋಜಿತ ಹೆಚ್ಚಿನ ಸಾಂದ್ರತೆಯ ಮತ್ತು ಉದ್ಯೋಗವಕಾಶ ಸೃಷ್ಟಿಸುವ ವಾಣಿಜ್ಯ ಮತ್ತು ಕೈಗಾರಿಕಾ ಅಭಿವೃದ್ಧಿಗಳನ್ನು ಉತ್ತೇಜಿಸುವ ಉದ್ದೇಶ ಹೊಂದಿರುವುದಾಗಿ ಹಾಗೂ ಸ್ಥಳೀಯ ನಗರ ಯೋಜನಾ ಪ್ರದೇಶದ ವ್ಯಾಪ್ತಿಯೊಳಗೆ ಹಾಗೂ ನಗರ ಸ್ಥಳೀಯ ಸಂಸ್ಥೆಯ ಎಲ್ಲೆಯ ಹೊರಭಾಗದಲ್ಲಿರುವ ಹಾಲಿ ರಸ್ತೆ ಸಂಪರ್ಕವನ್ನು ಪರಿಗಣಿಸಿಕೊಂಡು ಪ್ರಸ್ತಾಪಿತ Road Network Grid Plan ನ್ನುಸಮಗ್ರವಾಗಿ ರೂಪಿಸಿರುವುದಾಗಿ ಪ್ರಸ್ತಾವನೆಯಲ್ಲಿ ತಿಳಿಸಲಾಗಿದೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 76-ಕೆ ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, GIS ಆಧಾರಿತ Road Network Grid Plans ಗಳಿಗೆ ಸದರಿ ಕಾಯ್ದೆಯ ಕಲಂ 13(1)ರನ್ವಯ ತಾತ್ಕಾಲಿಕ ಅನುಮೋದನೆ ನೀಡುವ ಕುರಿತು ಈ ಕೆಳಕಂಡಂತೆ ಆದೇಶಿಸಿದೆ.

<u>ಸರ್ಕಾರದ ಆದೇಶ ಸಂಖ್ಯೆ: ನಅಇ 35 ಟಿಟಿಪಿ 2026(ಇ),</u>
<u>ಬೆಂಗಳೂರು, ದಿನಾಂಕ:09.09.2026.</u>

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 12(1)(ಬಿ) ರಂತೆ, ಅನುಬಂಧ-1 ರಲ್ಲಿರಿಸಿರುವ ಸ್ಥಳೀಯ ಯೋಜನಾ ಪ್ರದೇಶಗಳಿಗೆ ಅನುಮೋದಿತ ಮಹಾಯೋಜನೆಗಳ ಹಾಗೂ ಅನುಮೋದನೆ ಹಂತದಲ್ಲಿರುವ ಮಹಾಯೋಜನೆಗಳಲ್ಲಿ ಅಳವಡಿಸಲು ತಯಾರಿಸಿರುವ GIS ಆಧಾರಿತ Road

Network Grid Plan ಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 76-ಕೆ ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಸದರಿ ಕಾಯ್ದೆಯ ಕಲಂ 13(1)ರನ್ವಯ ಈ ಕೆಳಕಂಡ ನಿರ್ದೇಶನಗಳೊಂದಿಗೆ ಸರ್ಕಾರದ ತಾತ್ಕಾಲಿಕ ಅನುಮೋದನೆಯನ್ನು ನೀಡಲಾಗಿದೆ.

1) ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಯ ಕಲಂ 13 (1) ರಡಿ ನಿರ್ದಿಷ್ಟಪಡಿಸಿರುವಂತೆ ಸಂಬಂಧಪಟ್ಟ ನಗರಾಭಿವೃದ್ಧಿ ಪ್ರಾಧಿಕಾರಗಳು/ ಯೋಜನಾ ಪ್ರಾಧಿಕಾರಗಳು/ ಪುರಸಭೆ ಯೋಜನಾ ಪ್ರಾಧಿಕಾರಗಳು ಸಾರ್ವಜನಿಕ ಸಲಹೆ/ ಆಕ್ಷೇಪಣೆಗಳನ್ನು ಆಹ್ವಾನಿಸುವ ಸಂಬಂಧ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಲು ಕ್ರಮ ಕೈಗೊಳ್ಳತಕ್ಕದ್ದು.

2) ಸಂಬಂಧಪಟ್ಟ ನಗರಾಭಿವೃದ್ಧಿ ಪ್ರಾಧಿಕಾರ / ಯೋಜನಾ ಪ್ರಾಧಿಕಾರ/ ಪುರಸಭೆ ಯೋಜನಾ ಪ್ರಾಧಿಕಾರದ ಕಚೇರಿಗಳಲ್ಲಿ ಹಾಗೂ ಸಂಬಂಧಿಸಿದ ಸ್ಥಳೀಯ ಸಂಸ್ಥೆಗಳ ಕಚೇರಿಗಳಲ್ಲಿ Road Network Grid Plan ಗಳನ್ನು ಸಾರ್ವಜನಿಕರ ವೀಕ್ಷಣೆಗಾಗಿ ಇರಿಸತಕ್ಕದ್ದು.

3) ಸಾರ್ವಜನಿಕರು 60 ದಿನಗಳ ನಿಗಧಿತ ಕಾಲಾಮಿತಿಯೊಳಗೆ ಸಂಬಂಧಪಟ್ಟ ನಗರಾಭಿವೃದ್ಧಿ ಪ್ರಾಧಿಕಾರ/ ಯೋಜನಾ ಪ್ರಾಧಿಕಾರ/ ಪುರಸಭೆ ಯೋಜನಾ ಪ್ರಾಧಿಕಾರದ ಕಚೇರಿಗಳಿಗೆ ಸಲ್ಲಿಸುವ ಸಲಹೆ/ ಆಕ್ಷೇಪಣೆಗಳನ್ನು ನಿಯಮಾನುಸಾರ ಪರಿಶೀಲಿಸಿ, ಪರಿಗಣಿಸಬಹುದಾದ ಹಾಗೂ ತಿರಸ್ಕರಿಸಬಹುದಾದ ಸಲಹೆ/ ಆಕ್ಷೇಪಣೆಗಳ ಕುರಿತು ಅಗತ್ಯ ಕ್ರಮ ಕೈಗೊಂಡು ಅಂತಿಮ ಅನುಮೋದನೆಗಾಗಿ ಪ್ರಸ್ತಾವನೆಯನ್ನು ನಗರ ಭೂ ಸಾರಿಗೆ ನಿರ್ದೇಶನಾಲಯಕ್ಕೆ ಸಲ್ಲಿಸತಕ್ಕದ್ದು.

4) ಆಯುಕ್ತರು, ನಗರ ಭೂ ಸಾರಿಗೆ ನಿರ್ದೇಶನಾಲಯ ಇವರು ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 13(2) ರನ್ವಯ ಸರ್ಕಾರದ ಅಂತಿಮ ಅನುಮೋದನೆಗಾಗಿ ಪ್ರಸ್ತಾವನೆಯನ್ನು ಸಲ್ಲಿಸಲು ಕ್ರಮವಹಿಸತಕ್ಕದ್ದು.

5) Road Network Grid Plan ನ್ನು ಸರ್ಕಾರದ ಅಂತಿಮ ಅನುಮೋದನೆಗೆ ಸಲ್ಲಿಸುವ ಪೂರ್ವದಲ್ಲಿ ಹಾಲಿ ಚಾಲ್ತಿಯಲ್ಲಿರುವ ಮಹಾಯೋಜನೆಯ ಪ್ರಸ್ತಾಪಿತ ರಸ್ತೆ ಪರಿಚಲನಾ ಜಾಲದ ರಸ್ತೆಗಳೊಂದಿಗೆ ಜೋಡಣೆಯಾಗಿರುವ ಬಗ್ಗೆ ಹಾಗೂ ಸ್ಥಳೀಯ ಯೋಜನಾ ಪ್ರದೇಶದ ಹೊರಭಾಗದಲ್ಲಿ ಹೊಂದಿಕೊಂಡಂತೆ ಇರುವ ಪ್ರದೇಶಗಳ ರಸ್ತೆ ಜಾಲದೊಂದಿಗೆ ಯೋಜನಾಬದ್ಧವಾಗಿ ಜೋಡಣೆಯಾಗುವ ಬಗ್ಗೆ ಸಮಗ್ರವಾಗಿ ಪರಿಶೀಲಿಸಿ, ಸೂಕ್ತವಾಗಿ ಅಳವಡಿಸತಕ್ಕದ್ದು.

6) ಸಂಬಂಧಿತ ನಗರಾಭಿವೃದ್ಧಿ/ ಯೋಜನಾ/ ಪುರಸಭಾ ಯೋಜನಾ ಅನುಮೋದಿತ ಮಹಾಯೋಜನೆಯ ನಕ್ಷೆಗಳೊಂದಿಗೆ ಪ್ರಸ್ತಾಪಿತ ರಸ್ತೆ ಜಾಲಗಳನ್ನು GIS ತಂತ್ರಾಂಶವನ್ನು ಅಳವಡಿಸಿ Consolidated ನಕ್ಷೆಯನ್ನುತಯಾರಿಸುವುದು ಸೂಕ್ತವಾಗಿರುತ್ತದೆ.

7) **ಅನುಬಂಧ-1**ರಲ್ಲಿನ ಸ್ಥಳೀಯ ಯೋಜನಾ ಪ್ರದೇಶಗಳಲ್ಲಿ ಸಂಬಂಧ ಪಟ್ಟ ಸ್ಥಳೀಯ ಸಂಸ್ಥೆಗಳು ಹಾಗೂ ಇತರೆ ಇಲಾಖೆಗಳು ವಸತಿ (ಬಡಾವಣೆ) ನಿರ್ಮಾಣ, ರಸ್ತೆ ನಿರ್ಮಾಣ, ಮತ್ತು ಇತರೆ ಅಭಿವೃದ್ಧಿಗಳಿಗೆ ಅನುಮತಿಸುವಾಗ ಹಾಗೂ ಇತರೆ ಮೂಲ ಸೌಕರ್ಯ ಯೋಜನೆಗಳನ್ನು ಮಂಜೂರು ಮಾಡುವಾಗ Road Network Grid Plan ಗಳನ್ನು ಕಡ್ಡಾಯವಾಗಿ ಪರಿಗಣಿಸತಕ್ಕದ್ದು.

8) Road Network Grid Plan ನಲ್ಲಿ / ಚಾಲ್ತಿಯಲ್ಲಿರುವ ಮಹಾಯೋಜನೆಯಲ್ಲಿ ಪ್ರಸ್ತಾಪಿಸಿರುವ ವರ್ತುಲ ರಸ್ತೆಯ ಎರಡು ಬದಿಯಲ್ಲಿ 2.0ಕಿ.ಮೀ ವರೆಗೆ Impact Zone ಎಂದು ಪರಿಗಣಿಸಿ, ಸದರಿ Impact Zone ನಲ್ಲಿ ಅನುಮತಿಸಬಹುದಾದ ಉಪಯೋಗಗಳನ್ನು **ಅನುಬಂಧ-2** ರಲ್ಲಿ ನಮೂದಿಸಿದ್ದು, ಅದರಂತೆ ಹಾಗೂ ಸರ್ಕಾರವು ಹೊರಡಿಸುವ ನಿಯಮಾವಳಿಗಳನ್ವಯ ಅಭಿವೃದ್ಧಿಗಳಿಗೆ ಅನುಮತಿ ನೀಡಲು ಕ್ರಮವಹಿಸತಕ್ಕದ್ದು.

9) ಸಂಬಂಧಿತ ನಗರಾಭಿವೃದ್ಧಿ ಪ್ರಾಧಿಕಾರ/ ಯೋಜನಾ ಪ್ರಾಧಿಕಾರ/ ಪುರಸಭೆ ಯೋಜನಾ ಪ್ರಾಧಿಕಾರಗಳು ಮಹಾ ಯೋಜನೆಯನ್ನು ಪರಿಷ್ಕರಿಸುವ ಸಂದರ್ಭದಲ್ಲಿ Road Network Grid Plan ಗಳನ್ನು ಸೂಕ್ತವಾಗಿ ತಿದ್ದುಪಡಿಗಳೊಂದಿಗೆ ಮಹಾಯೋಜನೆಯಲ್ಲಿ ಅಳವಡಿಸಿಕೊಳ್ಳತಕ್ಕದ್ದು.

ಪ್ರಸ್ತಾಪಿತ ರಸ್ತೆ ಪರಿಚಲನಾ ನಕ್ಷೆಗಳಿಗೆ ಅನುಮೋದನೆ ನೀಡಿದ ಗುರುತಾಗಿ ನಕ್ಷೆಗಳ ಮೇಲೆ ಸರ್ಕಾರದ ಮುದ್ರೆಯನ್ನು ಹಾಕಲಾಗಿದೆ.

ಈ ಆದೇಶವನ್ನು ಸಚಿವ ಸಂಪುಟವು ಪ್ರಕರಣ ಸಂಖ್ಯೆ:ಸಿ.511/2026, ದಿನಾಂಕ:09.09.2026 ರಂದು ನೀಡಿರುವ ಅನುಮೋದನೆಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

**(ಲತಾ. ಕೆ)**
ಸರ್ಕಾರದ ಅಧೀನ ಕಾರ್ಯದರ್ಶಿ,
ಅಭಿವೃದ್ಧಿ ಪ್ರಾಧಿಕಾರ ಮತ್ತು ನಯೋಸೇ
ನಗರಾಭಿವೃದ್ಧಿ ಇಲಾಖೆ.

# ಅನುಬಂಧ- 1
## Road Network Grid Plan ತಯಾರಿಸಲಾಗಿರುವ ಸ್ಥಳೀಯ ಯೋಜನಾ ಪ್ರದೇಶಗಳ ವಿವರಗಳು.

| ಕ್ರ. ಸಂ. | ನಗರಾಭಿವೃದ್ಧಿ ಪ್ರಾಧಿಕಾರ | ಕ್ರ. ಸಂ. | ಯೋಜನಾ ಪ್ರಾಧಿಕಾರ | ಕ್ರ. ಸಂ. | ಪಟ್ಟಣ ಪಂಚಾಯಿತಿ/ ಪುರಸಭೆ/ ನಗರಸಭೆ ಯೋಜನಾ ಪ್ರಾಧಿಕಾರ |
|---|---|---|---|---|---|
| 1. | ಬೆಳಗಾವಿ | 1. | ಅಫ್ಜಲ್‌ಪುರ– ಗಾಣಗಾಪುರ | 1. | ಅಜ್ಜಂಪುರ |
| 2. | ಬಳ್ಳಾರಿ | 2. | ಅರಕಲಗೂಡು | 2. | ಆಳಂದ |
| 3. | ಬೀದರ್ | 3. | ಅರಸೀಕೆರೆ | 3. | ಅನವಟ್ಟಿ |
| 4. | ವಿಜಯಪುರ | 4. | ಬಾದಾಮಿ | 4. | ಔರಾದ್ |
| 5. | ಚಾಮರಾಜನಗರ | 5. | ಬಂಗಾರಪೇಟೆ | 5. | ಬಾಗೇಪಲ್ಲಿ |
| 6. | ಚಿಕ್ಕಮಗಳೂರು | 6. | ಬಂಟ್ವಾಳ | 6. | ಬೈಲಹೊಂಗಲ |
| 7. | ಚಿತ್ರದುರ್ಗ | 7. | ಬಸವಕಲ್ಯಾಣ | 7. | ಬಸವನ ಬಾಗೇವಾಡಿ |
| 8. | ಚಿಕ್ಕಬಳ್ಳಾಪುರ | 8. | ಬೇಲೂರು– ಹಳೇಬೀಡು | 8. | ಬೆಳ್ತಂಗಡಿ |
| 9. | ದಾವಣಗೆರೆ | 9. | ಚನ್ನರಾಯಪಟ್ಟಣ | 9. | ಭಾಲ್ಕಿ |
| 10. | ಗದಗ-ಬೆಟಗೇರಿ | 10. | ಚೆನ್ನೈ–ಬೆಂಗಳೂರು ಕೈಗಾರಿಕಾ ಕಾರಿಡಾರ್ | 10. | ಭಟ್ಕಳ |
| 11. | ಕಲಬುರಗಿ | 11. | ಚಿತ್ತಾಪುರ | 11. | ಬೀಳಗಿ |
| 12. | ಹಾಸನ | 12. | ಗಂಗಾವತಿ | 12. | ಬೀರೂರು |
| 13. | ಹಾವೇರಿ | 13. | ಗೌರಿಬಿದನೂರು | 13. | ಬ್ಯಾಡಗಿ |
| 14. | ಹೊಸಪೇಟೆ | 14. | ಗೋಕಾಕ | 14. | ಚಳ್ಳಕೆರೆ |
| 15. | ಹುಬ್ಬಳಿ- ಧಾರವಾಡ | 15. | ಹಂಪಿ ವಿಶ್ವ ಪಾರಂಪರಿಕ ಪ್ರದೇಶ ನಿರ್ವಹಣಾ ಪ್ರಾಧಿಕಾರ | 15. | ಚನ್ನಗಿರಿ |
| 16. | ಕೆ.ಜಿ.ಎಫ್ | 16. | ಹುಣಸೂರು | 16. | ಚಿಕ್ಕನಾಯಕನಹಳ್ಳಿ |
| 17. | ಕೋಲಾರ | 17. | ಇಲಕಲ್ | 17. | ಚಿಕ್ಕೋಡಿ |
| 18. | ಕೊಪ್ಪಳ | 18. | ಇಂಡಿ | 18. | ಚಿತ್ತಗುಪ್ಪ |
| 19. | ಮಂಡ್ಯ | 19. | ಜಮಖಂಡಿ | 19. | ದಾಂಡೇಲಿ |
| 20. | ಮಂಗಳೂರು | 20. | ಕಾಪು | 20. | ಗುಳೇದಗುಡ್ಡ |
| 21. | ರಾಯಚೂರು | 21. | ಕೃಷ್ಣರಾಜನಗರ | 21. | ಗುಂಡ್ಲುಪೇಟೆ |
| 22. | ಶಿವಮೊಗ್ಗ | 22. | ಕುಂದಾಪುರ | 22. | ಹಳಿಯಾಳ |
| 23. | ತುಮಕೂರು | 23. | ಕುಣಿಗಲ್ | 23. | ಹಾನಗಲ್ |
| 24. | ಉಡುಪಿ | 24. | ಕುಶಾಲನಗರ | 24. | ಹರಪನಹಳ್ಳಿ |
| 25. | ವಿಜಯನಗರ (ವಾಡಾ) | 25. | ಲಿಂಗಸುಗೂರು | 25. | ಹಿರಿಯೂರು |

| | |
|---|---|
| 26. | ಯಾದಗಿರಿ |
| 27. | ಶಿರಾ |
| 28. | ಸಿಂಧನೂರು |
| 29. | ಚಿಂತಾಮಣಿ |
| 30. | ಬಾಗಲಕೋಟೆ |
| 31. | ಕಾರವಾರ |
| 32. | ಮಡಿಕೇರಿ |
| 33. | ರಾಣಿಬೆನ್ನೂರು |
| 34. | ಮೈಸೂರು |

| | |
|---|---|
| 26. | ಮಾಳವಳ್ಳಿ |
| 27. | ಮಾಲೂರು |
| 28. | ಮಾನ್ವಿ |
| 29. | ಮಸ್ಕಿ |
| 30. | ಮೂಡುಬಿದಿರೆ |
| 31. | ಮುಧೋಳ |
| 32. | ಮುಳಬಾಗಿಲು |
| 33. | ನಿಪ್ಪಾಣಿ |
| 34. | ಪುತ್ತೂರು |
| 35. | ರಬಕವಿ–ಬನಹಟ್ಟಿ |
| 36. | ರಾಮದುರ್ಗ |
| 37. | ಸಾಗರ |
| 38. | ಸಕಲೇಶಪುರ |
| 39. | ಸೇಡಂ |
| 40. | ಶಹಾಪುರ |
| 41. | ಶೋರಾಪುರ |
| 42. | ಸಿದ್ಲಘಟ್ಟ |
| 43. | ಸಿಂದಗಿ |
| 44. | ಸಿರಸಿ |
| 45. | ಸೋಮವಾರಪೇಟೆ |
| 46. | ಸುಳ್ಯ |
| 47. | ತಿಪಟೂರು |
| 48. | ವೇಮಗಲ್–ಕುರುಗಲ್ |
| 49. | ವಿರಾಜಪೇಟೆ |
| 50. | ವಾಡಿ–ಶಹಾಬಾದ್ |

| | |
|---|---|
| 26. | ಹೊಳಲ್ಕೆರೆ |
| 27. | ಹೊಳೆನರಸೀಪುರ |
| 28. | ಹೊನ್ನಾಳಿ |
| 29. | ಹೊನ್ನಾವರ |
| 30. | ಹೊಸದುರ್ಗ |
| 31. | ಹುಮನಾಬಾದ್ |
| 32. | ಹುನಗುಂದ |
| 33. | ಜಗಳೂರು |
| 34. | ಕಡೂರು |
| 35. | ಕಮಠಗಿ |
| 36. | ಕಂಪ್ಲಿ |
| 37. | ಕಾರ್ಕಳ |
| 38. | ಕೇರೂರು |
| 39. | ಕಿತ್ತೂರು |
| 40. | ಕೊಳ್ಳೇಗಾಲ |
| 41. | ಕೊಪ್ಪ |
| 42. | ಕೊರಟಗೆರೆ |
| 43. | ಕುಮಟಾ |
| 44. | ಕುಂದಗೋಳ |
| 45. | ಕುಷ್ಟಗಿ |
| 46. | ಲಕ್ಷ್ಮೇಶ್ವರ |
| 47. | ಮಧುಗಿರಿ |
| 48. | ಮಹಾಲಿಂಗಪುರ |
| 49. | ಮಾಳೇಬೆನ್ನೂರು |
| 50. | ಮುಧೋಳಗಿ |
| 51. | ಮುದ್ದೇಬಿಹಾಳ |
| 52. | ಎನ್. ಆರ್. ಪುರ |
| 53. | ನರಗುಂದ |
| 54. | ನವಲಗುಂದ |
| 55. | ನ್ಯಾಮತಿ |
| 56. | ಪಾವಗಡ |
| 57. | ಪಿರಿಯಾಪಟ್ಟಣ |
| 58. | ರೋಣ |
| 59. | ಸಾಲಿಗ್ರಾಮ |
| 60. | ಸಂಕೇಶ್ವರ |
| 61. | ಸವದತ್ತಿ |
| 62. | ಸವಣೂರು |
| 63. | ಶಿಕಾರಿಪುರ |

| | |
|---|---|
| 64. | ಶಿರಹಟ್ಟಿ |
| 65. | ಸಿದ್ದಾಪುರ |
| 66. | ಸಿರುಗುಪ್ಪ |
| 67. | ಸೊರಬ |
| 68. | ಶ್ರೀರಂಗಪಟ್ಟಣ |
| 69. | ಟಿ. ನರಸೀಪುರ |
| 70. | ತಾಳಿಕೋಟೆ |
| 71. | ತರೀಕೆರೆ |
| 72. | ತೇರದಾಳ |
| 73. | ತುರವೇಕೆರೆ |
| 74. | ಯಲಬುರ್ಗಾ |

**(ಲತಾ. ಕೆ)**
ಸರ್ಕಾರದ ಅಧೀನ ಕಾರ್ಯದರ್ಶಿ
(ಅಭಿವೃದ್ಧಿ ಪ್ರಾಧಿಕಾರ ಮತ್ತು ನಯೋಸೇ
ನಗರಾಭಿವೃದ್ಧಿ ಇಲಾಖೆ

## ಅನುಬಂಧ-2

**List of high density development activities permitted in the Impact Zone (2km on either side of the Proposed Ring Road)**

| Sl.No | Category of Developments | Permissible activities allowed in the Impact zone |
|---|---|---|
| 1 | **RESIDENTIAL** | Residential townships, Apartments, Residential High-rise buildings, and its ancillary activities, Town Planning Schemes, All Government Projects etc. |
| 2 | **COMMERCIAL** | Wholesale Market, Hotels, Warehouses, Offices, Banks, Supermarkets, Automobile Showrooms and Service Centers, Business Parks, APMC yard, Community Hall etc. |
| 3 | **INDUSTRIAL** | All industrial activities except hazardous industries |
| 4 | **PUBLIC & SEMI PUBLIC** | Schools, Colleges, Hospitals, Skill development Centers, Government Offices, Community Facilities, Police station, Fire station, Sports Complex, Religious/Worship Places etc. |
| 5 | **PARK & OPEN SPACE** | Parks, Urban/Peri-urban Forestry, Open Space, Biodiversity Areas etc. |

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



| | | |
|---|---|---|
| 6 | **Water Bodies** | Rejuvenation of water bodies like lakes, canals etc. |
| 7 | **TRANSPORTATION AND COMMUNICATION** | Bus Terminal, Truck Terminal, Logistics Hub, Multimodal Facility, Transport Depot, Parking, EV Charging,Fuel Stations, Warehousing, Logistics Park, Distribution Centers, Cold Storage, Freight Yard, Agricultural Logistics etc. |
| 8 | **TOURISM & RECREATION** | Resorts, Tourism Facilities, Amusement park, water Sports, Farm Tourism, Recreation Centers, Eco-Tourism etc. |
| 9 | **PUBLIC UTILITIES** | Water Supply, STP, Solid Waste Facility, Substation, Dumping yard, Utilities, Infrastructure Facilities etc. |
| 10 | **AGRICULTURAL** | Agri Market, Farm Gate Processing, Nurseries, Rain water harvesting, Horticulture, Orchards, Agricultural Storage, All renewable energy projects etc. |

**(ಲತಾ. ಕೆ)**
ಸರ್ಕಾರದ ಅಧೀನ ಕಾರ್ಯದರ್ಶಿ
(ಅಭಿವೃದ್ಧಿ ಪ್ರಾಧಿಕಾರ ಮತ್ತು ನಯೋಸೇ
ನಗರಾಭಿವೃದ್ಧಿ ಇಲಾಖೆ

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

P S BASAVARAJU